

# ಪರೀಕ್ಷೆ

ವಸುಮತಿ ಉಡುಪ
ಕಲೆ: ಭಾಸ್ಕರ್

‘ನಿಂಗೊಂದು ಹಳೇ ಜೋಕು ಗೊತ್ತನೇ?’ ಕೇಳಿದರು ಜಾನಕಮ್ಮ. ತಾಯಿ, ಮಗಳು ವಾರಕ್ಕೊಮ್ಮೆಯಾದರೂ ಫೋನಿನಲ್ಲಿ ಮನಸೋಇಚ್ಛೆ ಮಾತಾಡಿಕೊಳ್ಳುತ್ತಿದ್ದರು.

‘ಏನೇ ಆದ್ರೂ ಜೋಕು ಗೀಕು ಅಂತಿರ್ತೀಯಲ್ಲ ಅಮ್ಮಾ, ಪರವಾಗಿಲ್ಲ ನೀನು...’

‘ತಲೇ ಮೇಲೆ ಕೈ ಹೊತ್ಗಂಡು ಕೂತ್ರೆ ಎಲ್ಲಾ ಸರಿಯಾಗಿ ಬಿಡುತ್ತಾ? ಏನು ಬರುತ್ತೋ ಅದನ್ನ ಅನುಭವಿಸ್ಲೇಬೇಕಲ್ಲ, ಕರ್ಮ’

‘ನಿನ್ನ ಧೈರ್ಯ ನಂಗಿಲ್ಲ ಅಮ್ಮಾ, ಚೂರು ಹೆಚ್ಚು ಕಮ್ಮಿ ಆದ್ರೂ ಕೈಕಾಲು ಬಿದ್ಹೋಗುತ್ತೆ’.

‘ನಂಗೂ ಹಾಗೇ ಆಗ್ತಿತ್ತು ಕಣೇ. ಉಳಿ ಪೆಟ್ಟು ಬಿದ್ದು ಬಿದ್ದು ಈಗ ಜಡ್ಡುಗಟ್ಟಿ ಹೋಗಿದೀನಿ’, ಒಂದು ದೀರ್ಘ ನಿಟ್ಟುಸಿರು. ಮಗಳು ಅಮ್ಮನ ಅಳಲನ್ನು ಅರ್ಥ ಮಾಡಿಕೊಂಡಳು. ತಾನು ಅವರನ್ನು ಕೆಣಕಿ ಹಳೆಯ ನೋವಿನ ಹಕ್ಕಳೆಯನ್ನು ಕಿತ್ತುಬಿಟ್ಟೆ ಎಂದು ಅವಳಿಗನಿಸಿತು. ಮನಸ್ಸು ಮುದುಡಿತು. ಚೊಚ್ಚಲು ಹೆರಿಗೆಯಲ್ಲಿ ತೀರಿಕೊಂಡಿದ್ದಳು ಅಕ್ಕ. ಜೊತೆಗೆ ಹೊಟ್ಟೆಯೊಳಗಿದ್ದ ಮಗುವೂ. ಬಿಪಿ ಹೆಚ್ಚಾಗಿದ್ದು ಎನ್ನುವುದು ಡಾಕ್ಟರ ಹೇಳಿಕೆ. ಸಾವಿಗೊಂದು ನೆಪ. ಮಗಳ ಬಾಣಂತನಕ್ಕೆಂದು ಅದೆಷ್ಟೊಂದು ತಯಾರಿ ಮಾಡಿಟ್ಟುಕೊಂಡಿದ್ದಳು ಅಮ್ಮ. ಎಳೆ ಮಗುವಿಗೆ ಅಗತ್ಯವಾದ ಬಟ್ಟೆಬರೆ, ಕುಲಾವಿ, ಕಾಲುಚೀಲಗಳಿಂದ ತೊಡಗಿ ತೊಟ್ಟಿಲ ಖರೀದಿಯವರೆಗೂ. ಬಾಣಂತಿಯಾದವಳಿಗೆ ಅಟ್ಟು ಉಣಿಸಬೇಕಾದ ಕಾಳುಮೆಣಸಿನಪುಡಿಯಿಂದ ಹಿಡಿದು ಕಾಳುಜೀರಿಗೆ ಪುಡಿಯವರೆಗೂ. ಯಾರ್‍ಯಾರೋ ಅನುಭವಿಗಳಿಂದ ಕೇಳಿಕೊಂಡು ಬಾಣಂತಿ ಉಪಚಾರ, ಪಥ್ಯಪಾನಗಳ ಕುರಿತು ನೋಟ್‌ಬುಕ್ಕಿನಲ್ಲಿ ಬರೆದಿಟ್ಟುಕೊಂಡು ‘ಉಂಟು ಹಬ್ಬ ನಿನಗೆ’ ತಮಾಷೆ ಮಾಡುತ್ತಿದ್ದಳು ತಂಗಿ.

‘ಈಗೆಲ್ಲಾ ತಿಂಗಳುಗಟ್ಟಲೆ ಯಾರು ಬಾಣಂತನ ಮಾಡಿಸ್ಕೋತಾರೆ ಅಮ್ಮಾ? ನೀನು ಅತೀ ಆಡ್ತಿದ್ರೆ ತಿಂಗಳು ಕಳೀತಿದ್ಹಾಗೆ ನಾನು ಗಂಡನ ಮನೆಗೆ ಓಡಿ ಹೋಗ್ತೀನಿ’ ಅನ್ನುತ್ತಿದ್ದಳು ಮಗಳು. ಓಡಿ ಹೋಗಿದ್ದು ಗಂಡನ ಮನೆಗಲ್ಲ, ಇನ್ಯಾವತ್ತೂ ತಿರುಗಿ ಬಾರದ ಲೋಕಕ್ಕೆ. ಆಗ ಡಿಗ್ರಿಯ ಎರಡನೇ ವರ್ಷದಲ್ಲಿ ಓದುತ್ತಿದ್ದಳು ಸ್ವಾತಿ. ತಿಂಗಳುಗಟ್ಟಲೆ ಹಾಸಿಗೆ ಹಿಡಿದಿದ್ದ ಅಮ್ಮನನ್ನು ಕಣ್ಣ ಗೊಂಬೆಯಂತೆ ಜೋಪಾನ ಮಾಡಿದ್ದಳು. ಅಪ್ಪನಿಗೆ ಹೊರಗಿನ ಪ್ರಪಂಚ ಇತ್ತು. ಅಲ್ಲಿಯ ಕರ್ತವ್ಯದ ಜವಾಬ್ದಾರಿ ಇತ್ತು. ಸ್ವಂತ ಚಿಂತೆಯನ್ನು ಬದಿಗಿಟ್ಟು ಅದನ್ನು ನಿಭಾಯಿಸಬೇಕಾದ ಒತ್ತಡ ಇತ್ತು. ಆದರೆ ಅಮ್ಮನಿಗೆ?

‘ಹೀಗೇ ಆದ್ರೆ ನಿಂಗೆ ಹುಚ್ಚು ಹಿಡಿಯುತ್ತೆ ಅಮ್ಮಾ. ಇಂತಹ ನೋವು ಅನುಭವಿಸೋರು ಪ್ರಪಂಚದಲ್ಲಿ ಎಷ್ಟು ಜನ ಇದಾರೋ? ನಮಗೆ ಮಾತ್ರ...’ ಅಂದ್ಕೊಂಡು ಕೊರಗೋದು ನಮ್ಮ ಭ್ರಮೆ’, ವಯಸ್ಸಿಗೂ ಮೀರಿ ಮಾಗಿದ ಸ್ವಾತಿ ಅಮ್ಮನಿಗೆ ಸಾಂತ್ವನ ಹೇಳುತ್ತಿದ್ದಳು.

‘ಹೇಳೋಕೆ ಸುಲಭ’ ಅನ್ನುತ್ತಿದ್ದ ಜಾನಕಮ್ಮ ಅದ್ಯಾವ ಮಾಯದಲ್ಲಿ ವಾಸ್ತವಕ್ಕೆ ಮರಳಿದರೋ? ಅಥವಾ ವಾಸ್ತವವನ್ನು ಒಪ್ಪಿಕೊಂಡಿದ್ದು? ಜೀರ್ಣಿಸಿಕೊಂಡಿದ್ದು?

‘ನನ್ನ ಚಾಕರಿ ಮಾಡ್ತಾ ನೀನು ಮನೆಗೆ ಅಂಟ್ಕೊಂಡಿದ್ರೆ ನಿನ್ನ ಭವಿಷ್ಯಾನೂ ಹಾಳಾಗುತ್ತೆ. ನೀನಾದ್ರೂ ಸುಖವಾಗಿರು ಕಂದಾ. ನನ್ನ ಆಯುಷ್ಯಾನೂ ನಿನಗೇ ಇರ್ಲಿ...’ ಎನ್ನುತ್ತಾ ಹಾಸಿಗೆ ಮಡಚಿ ಪಕ್ಕಕ್ಕಿಟ್ಟು ಮೇಲೆದ್ದಿದ್ದರು ಜಾನಕಮ್ಮ. ಅಲ್ಲಿಂದಾಚೆಗೆ ಅವರಲ್ಲಿ ಯಾವುದೋ ಹೊಸ ಚೈತನ್ಯ ಆವಾಹನೆಯಾದಂತೆ ಮೇಲ್ನೋಟಕ್ಕಂತೂ ಕಾಣಿಸುತ್ತಿತ್ತು. ಕಷ್ಟ ಕೊಡ್ತೀಯಾ? ಕೊಡು. ಅದೇನು ಕೊಡ್ತೀಯೋ ಕೊಡು. ಯಾರು ಗಟ್ಟಿ ನೋಡೇ ಬಿಡೋಣ ಎಂದು ದೇವರಿಗೆ ಸವಾಲು ಹಾಕುವವರಂತೆ ಅಮ್ಮ ಕಾಣಿಸತೊಡಗಿದ್ದು ಸ್ವಾತಿಯ ಹಳವಂಡವೂ ಇರಬಹುದು. ಅಂತೂ ಹಳಿ ತಪ್ಪಿದ ಬದುಕು ಮತ್ತೆ ಹಳಿಗೆ ಬಂದಿತ್ತು. ಅವೆಲ್ಲಾ ನೆನಪಾದಾಗಲೊಮ್ಮೆ ಕಾಡುವ ಹಳೆಯ